ಎನ್. ಜಗನ್ನಾಥ ಪ್ರಕಾಶ್

# ವಿಲಾಸಿ ರಂಗಭೂಮಿಯ ತಾರೆ
# ಬಿ.ಎಸ್. ನಾರಾಯಣ ರಾವ್



ಸ್ಫುಟ ನುಡಿ, ಎತ್ತರದ ನಿಲುವು, ಸದೃಢ ಮೈಕಟ್ಟು ಹೊಂದಿದ್ದು ಹವ್ಯಾಸಿ ರಂಗಭೂಮಿಯಲ್ಲಿ ತಮ್ಮ ವಿಶಿಷ್ಟ ಪಾತ್ರಾಭಿನಯದ ಮೂಲಕ ಛಾಪು ಮೂಡಿಸಿದ ವಿಲಾಸಿ ರಂಗಭೂಮಿಯ ತಾರೆ ಬಿ.ಎಸ್. ನಾರಾಯಣ ರಾವ್.

ಬೆಂಗಳೂರಿನಲ್ಲಿ ಹುಟ್ಟಿ ಸಾಹಿತ್ಯ ಸಂಸ್ಕೃತಿ ದಿಗ್ಗಜರ ಒಡನಾಟವಿಟ್ಟುಕೊಂಡಿದ್ದ ಬಿ.ಎಸ್. ನಾರಾಯಣ ರಾವ್ ಅವರಿಗೆ ಹೆಸರಿಟ್ಟವರು ವಿಶ್ವಕವಿ ರವೀಂದ್ರನಾಥ ಟ್ಯಾಗೋರ್. ಕಲೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಅಪಾರ ಆಸಕ್ತಿ ಇದ್ದ ಬಿ.ವಿ. ಸುಬ್ಬರಾಯರ ಮನೆಗೆ ರವೀಂದ್ರರು ಬಂದಾಗ ನಾರಾಯಣರಾಯರಿನ್ನೂ ಹಸುಳೆ. ರವೀಂದ್ರರೇ ಕಂದನನ್ನು ನಾರಾಯಣ ಎಂದು ಕರೆದಿದ್ದರು.

ನಾಟಕಕಾರ ಟಿ.ಪಿ. ಕೈಲಾಸಂ ಅವರೊಂದಿಗೆ ನಾರಾಯಣರ ಅಣ್ಣ ಬಿ.ಎಸ್. ರಾಮರಾವ್ ಅವರಿಗೆ ಗೆಳೆತನವಿತ್ತು. ಹೀಗಾಗಿ ಕೈಲಾಸಂ ಬರೆದ ನಾಟಕಗಳಲ್ಲಿ ರಾಯರು ಅಭಿನಯಿಸಲು ಶುರುಮಾಡಿದರು.

ನ್ಯಾಷನಲ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಮತ್ತೆ ಕೈಲಾಸಂ ರಚಿಸಿದ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸುತ್ತಿದ್ದ ರಾಯರು ಕೈಲಾಸಂ ಅವರ ಪ್ರಸಿದ್ಧ ಆಂಗ್ಲ ನಾಟಕ 'ಕರ್ಣ'ದಲ್ಲಿ 'ಕರ್ಣ'ನ ಪಾತ್ರದಲ್ಲಿ ಕಾಣಿಸಿಕೊಂಡರು. ಅಲ್ಲಿಂದಾಚೆ ಅವರು ರಂಗ ಪ್ರಪಂಚವನ್ನು ಬಿಡಲೇ ಇಲ್ಲ.

ಇವರ ಅಭಿನಯವನ್ನು ಮೆಚ್ಚಿಕೊಂಡ ಕೈಲಾಸಂ ಅವರು ತಮ್ಮ ಕೆಲವು ನಾಟಕಗಳಲ್ಲಿ ನಾರಾಯಣರಾಯರನ್ನು ತೊಡಗಿಸಿದರು. ನಟನೆ ಜೊತೆಗೆ ನಾಟಕ ಅಭ್ಯಾಸದ ಮೇಲ್ವಿಚಾರಣೆಯನ್ನು ವಹಿಸಿಕೊಟ್ಟರು. ದೇಹ ಸೌಂದರ್ಯದ ಗುಟ್ಟನ್ನೂ ಹೇಳಿಕೊಟ್ಟರು.

'ಅಮ್ಮಾವ್ರ ಗಂಡ', 'ಹೋಂ ರೂಲ್', 'ಗಂಡಸ್ಕತ್ರಿ' ಮೊದಲಾದ ಕೈಲಾಸಂ ನಾಟಕಗಳಲ್ಲಿ ನಾರಾಯಣ ರಾವ್ ಮುಖ್ಯ ಪಾತ್ರಧಾರಿ. ಕುವೆಂಪು ಅವರ 'ಜಲಗಾರ' ನಾಟಕದಲ್ಲಿನ ಅಭಿನಯವೂ ಅವರಿಗೆ ಹೆಸರು ತಂದು ಕೊಟ್ಟಿತು.